ನಾನು ಈಗಾಗಲೇ ಹೇಳಿದ ಹಾಗೆ ಇದು ಬಹಳ ಕಷ್ಟದ ವೃತ್ತಿ. ಪುರುಷ ಪಾರಮ್ಯದ ಕ್ಷೇತ್ರ. ಹೆಣ್ಣುಮಕ್ಕಳಿಗಿರುವ ಬದುಕಿನ ಬಿಕ್ಕಟ್ಟುಗಳ ಜೊತೆ ಈ ವೃತ್ತಿ ಸಂಬಂಧ ಸವಾಲುಗಳನ್ನು ಎದುರಿಸುತ್ತ ಗ್ರಂಥ ಸಂಪಾದನೆ ಮಾಡುವುದು ಅಷ್ಟು ಸುಲಭವಲ್ಲ. ನನ್ನ ವೃತ್ತಿಯೇ ಇದಾದ್ದರಿಂದ ನಾನಿಷ್ಟು ದೀರ್ಘಕಾಲ, ಗರಿಷ್ಠ ಸಂಖ್ಯೆಯಲ್ಲಿ ಗ್ರಂಥ ಸಂಪಾದನೆ ಮಾಡಲು ಸಾಧ್ಯವಾಯಿತು. 'ಗ್ರಂಥ ಸಂಪಾದನೆಯ ಇತ್ತೀಚಿನ ಒಲವುಗಳು' ಎನ್ನುವ ಲೇಖನ ಬರೆಯುವಾಗ ದೇಶದಾದ್ಯಂತ ಗ್ರಂಥ ಸಂಪಾದಕರ ಕುರಿತು ಗಮನಿಸಿದೆ. ನೆರೆಯ ತಮಿಳು ನಾಡಿನಲ್ಲಿ, ಕೇರಳದಲ್ಲಿ ಒಂದಿಷ್ಟು ಕೆಲಸಗಳು ನಡೆಯುತ್ತಿವೆ. ಗ್ರಂಥ ಸಂಪಾದನೆಮಾಡಿದ ಒಬ್ಬಿಬ್ಬರು ಹೆಣ್ಣುಮಕ್ಕಳನ್ನು ಗುರುತಿಸಿದ್ದೇನೆ. ಆದರೆ, ದೊಡ್ಡ ಪ್ರಮಾಣದಲ್ಲಿ ಗ್ರಂಥ ಸಂಪಾದನೆಮಾಡಿದ ಮಹಿಳೆಯರು ನನ್ನ ಕಣ್ಣಿಗೆ ಬಿದ್ದಿಲ್ಲ.

◆ **ನಮ್ಮ ಭಾರತದ ಸಂದರ್ಭದಲ್ಲಿ ಹಸ್ತಪ್ರತಿ ಸಂಪಾದನಾ ಕಾರ್ಯ ಹೇಗೆ ನಡೆಯುತ್ತಿದೆ? ದೇಶದ ಯಾವ ಕಡೆ ಅಥವಾ ಯಾವ ವಿಶ್ವವಿದ್ಯಾಲಯಗಳು ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿವೆ? ಅಲ್ಲಿ ಆಗಿರುವ ಮುಖ್ಯ ಕೆಲಸಗಳೇನು? ನಮ್ಮ ರಾಜ್ಯದಲ್ಲೂ ಅವನ್ನು ಅಳವಡಿಸಿಕೊಳ್ಳಬಹುದೆ?**

ಭಾರತದ ಸಂದರ್ಭದಲ್ಲಿ ಹಸ್ತಪ್ರತಿ ಸಂಪಾದನ ಕಾರ್ಯ ನಿರಂತರವಾಗಿ ನಡೆದುಕೊಂಡು ಬರುತ್ತಿರುವುದು ಸಂಸ್ಕೃತದಲ್ಲಿ. ಒಂದು ಕಾಲದಲ್ಲಿ ತಮಿಳು, ತೆಲುಗು, ಮಲಯಾಳಂ ಭಾಷೆಗಳಲ್ಲಿ ಈ ಕಾರ್ಯ ವಿಪುಲವಾಗಿ ನಡೆಯುತ್ತಿತ್ತು. ಈಗ ಯಾವುದೇ ಭಾಷೆಯಲ್ಲಿ ಪ್ರಾಚೀನ ಸಾಹಿತ್ಯ ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆ. ದಕ್ಷಿಣ ಭಾರತದಲ್ಲಿ ಹಿಂದಿನ ವಿದ್ವಾಂಸರು ಸಂಪಾದಿಸಿದ ಕೃತಿಗಳೇ ಪುನರ್ಮುದ್ರಣಗೊಳ್ಳುತ್ತಿವೆ. ಉತ್ತರ ಭಾರತದ ಭಾಷೆಗಳಲ್ಲಿಯೂ ಇದೇ ಪರಿಸ್ಥಿತಿ ಇರುವಂತಿದೆ. ಹಾಗೆ ನೋಡಿದರೆ ಕನ್ನಡದಲ್ಲಿಯೇ ಇನ್ನು ಅಪ್ರಕಟಿತ ಕೃತಿಗಳು ಅಚ್ಚಾಗುತ್ತಿವೆ ಎನ್ನಬಹುದು. ಆದರೆ, ಇಲ್ಲಿಯೂ ಹಿಂದಿನ ಆವೇಗವಿಲ್ಲ.



ಸಂದರ್ಶಕಿ ಉಷಾ ನರಸಿಂಹನ್ ಮತ್ತು ವೈ.ಸಿ. ಭಾನುಮತಿ